ಸ್ವಂತ 25 ಎಕರೆಯಲ್ಲಿ 10-12 ಸಲ ಕ್ರಿಮಿನಾಶಕಗಳನ್ನು ಸಿಂಪಡಿಸಿದರೆ 25 ಎಕರೆಯಲ್ಲಿ .....

ಶ್ರೀ ಜಿ. ಪುಟ್ಟಸ್ವಾಮಿಗೌಡ : ಸನ್ಮಾನ್ಯ ಅಧ್ಯಕ್ಷರೇ ಸದಸ್ಯರು ಗುಲ್ಬರ್ಗ ಜಿಲ್ಲೆಯಲ್ಲಿ ಕೀಟ ಬಾಧೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ.....

ಶ್ರೀ ಡಿ.ಬಿ ಚಂದ್ರೇಗೌಡ : ಅಧ್ಯಕ್ಷರೇ ಮಾನ್ಯ ಸದಸ್ಯರು ಮೊದಲು ತಮಗೆ ಪ್ರಶ್ನೆ ಕೇಳಿದ್ದಾರೆ. ಮೊದಲು ತಾವು ಉತ್ತರ ಹೇಳಬೇಕು.

ಅಧ್ಯಕ್ಷರು : ಅದೇ ಒರಿಜಿನಲ್ ಫೈಲ್ ತರಿಸಿದ್ದೇನೆ. ನೋಡ್ತಾ ಇದ್ದೀನಿ ಅಲ್ಲಿಯವರೆಗೆ ಮಂತ್ರಿಗಳು ಉತ್ತರ ಹೇಳ್ತಾ ಇರಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ತೊಗರಿ ಬೆಳೆಗೆ ನಷ್ಟವಾಗಿರುವುದು ನಿಜ. ಕಾರಣ ಹಲವಾರು. ಒಂದು, ನವೆಂಬರ್ ಎರಡನೇ ವಾರದಲ್ಲಿ ಸಾಕಷ್ಟು ಮೋಡಕವಿದ ವಾತಾವರಣ ಇದ್ದು ರೈತರು ಸಿಂಪಡಿಸಿದ ಕೀಟನಾಶಕದಿಂದ ಕೀಟಗಳು ನಾಶವಾಗಲಿಲ್ಲ, ಬೇಕಾದ ಪ್ರಮಾಣವನ್ನೂ ಅವರು ಹಾಕಲಿಲ್ಲ ಈ ಕಾರಣದಿಂದ ರೆಸಿಸ್ಟೆನ್ಸ್ ಬಂದಿದ್ದರಿಂದ ಕಾಯಿಲೆ ಜಾಸ್ತಿ ತೊಗರಿ ನಷ್ಟವಾಗಿರುವುದು ನಿಜ ಈ ಸಲ ಅದನ್ನು ಹೋಗಲಾಡಿಸುವುದಕ್ಕಾಗಿ ನಮ್ಮ ರೈತರು ಸಿಂಪರಣೆ ಕಾರ್ಯವನ್ನು ಮೋಡವಿಲ್ಲದ ಸಂದರ್ಭದಲ್ಲಿ ಮಾಡಬೇಕಾಗಿತ್ತು. ಅದರ ಹಿನ್ನೆಲೆಯಲ್ಲಿ ನಷ್ಟವಾಗಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಸರ್ಕಾರದ ಗಮನಕ್ಕೆ ಬಂದರೂ ಸಹ ನನ್ನ ಎರಡು ಪ್ರಶ್ನೆಗೆ ಉತ್ತರ ಬಂದರೆ ಅದರಿಂದ ಲಾಭವಾಗುತ್ತದೆ ರೈತರಿಗೆ?

ಶ್ರೀ ಬಿ. ಪುಟ್ಟಸ್ವಾಮಿಗೌಡ : ಕೀಟನಾಶಕ ಔಷಧಿಯನ್ನು ಸಿಂಪಡಿಸುವುದರ ಬಗ್ಗೆ ರೈತರಿಗೆ ಸಾಕಷ್ಟು ಪ್ರಚಾರ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆ. ಭಿತ್ತಿಪತ್ರಿಗಳ ಮೂಲಕ, ಪತ್ರಿಕೆಗಳ ಮೂಲಕ ಮಾಡಿದ್ದೇನೆ. ರೇಡಿಯೋ ಮೂಲಕ, ಮಾಡಿದ್ದೇವೆ. ಅದರ ಹಿನ್ನೆಲೆಯಲ್ಲಿ ರೈತರು ಸಿಂಪಡಿಸಿದರೆ ಮಾತ್ರ ಕೀಟಬಾಧೆಯನ್ನು ತಡೆಗಟ್ಟಬಹುದೆಂದು ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ರೈತರು ಆ ಕ್ರಿಮಿನಾಶಗಳನ್ನು ನೋಡಿ ಉಪಯೋಗಿಸುತ್ತಿದ್ದಾನೆ. ಯಾವ ಪ್ರಕಾರವು ಅಲಕ್ಷ್ಯ ಮಾಡುವುದಿಲ್ಲ. ಏಕೆಂದರೆ ರೈತರು 10-15 ವರ್ಷಗಳಿಂದ ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಿದ್ದಾರೆ. ಸರಿಯಾಗಿ ಮಾಡುತ್ತಾರೆ. ಆದರೆ ಅವರಿಗೆ ಪರಿಣಾಮಕಾರಿ ಔಷಧಗಳು ಸಿಗುತ್ತಿಲ್ಲ ಅವುಗಳ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ವ್ಯವಸ್ಥೆ ಮಾಡುತ್ತೇನೆ ಸ್ವಾಮಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ಹುಣಸೂರು ತಾಲ್ಲೂಕಿನಲ್ಲಿ ಬರಗಾಲದಿಂದ ಬೆಳೆಗಳು ನಾಶವಾಗುತ್ತಿರುವುದು.

1444 - ಶ್ರೀಮತಿ ಚಂದ್ರಪ್ರಭಾ ಅರಸು (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕು ಬಹಳ ಬರಗಾಲಕ್ಕೆ ತುತ್ತಾಗಿದ್ದು ಸಂಪೂರ್ಣ ಬೆಳೆಗಳು ನಷ್ಟವಾಗಿ ಜನ ಜಾನುವಾರು ತೀವ್ರಬಡವಣೆಗೆ ಒಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಅ) ಹಾಗಿದ್ದಲ್ಲಿ, ಜನರಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದ, ಮತ್ತು ಕೆರೆ ಕಟ್ಟೆಗಳ ಹೊಳು ತೆಗೆದು ದುರಸ್ತಿಗೊಳಿಸುವ ಕಾರ್ಯಗಳು ದುರಸ್ತಿಗೊಳಿಸುವ ಕಾರ್ಯಗಳು ತ್ವರಿತಗತಿಯಿಂದಾಗಲೂ ಸರ್ಕಾರದವರು ಕ್ರಮ ಕೈಗೊಳ್ಳುವರೇ,

ಇ) ಸಂಬಂಧಪಟ್ಟ ಕಾರ್ಯಗಳಿಗೆ ಹೆಚ್ಚಿನ ಅನುದಾನ ಕೊಡುವ ಮೂಲಕ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಅಭಾವಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಗಾಗಲೇ ಕೈಗೊಂಡಿದೆ.

ಇ) 1990-91ರಲ್ಲಿ ಕೊಳವೆ ಬಾವಿಗಳನ್ನು ತೋಡಲು ಹಣಸೂರು ತಾಲ್ಲೂಕಿಗೆ 4.2 ಲಕ್ಷ. ರೂ ಗಳನ್ನು ಬಿಡುಗಡೆ ಮಾಡಿದ್ದು ಈಗಾಗಲೇ 11 ಕೊಳವೆ ಬಾವಿಗಳನ್ನು ತೋಡಿದ್ದುಆದ್ಯತೆ ಮೇರೆಗೆ ಇನ್ನೂ 11 ಕೊಳವೆ ಬಾವಿಗಳನ್ನು ತೋಡಲು ಕ್ರಮ ಕೈಗೊಂಡಿದೆ.

ಬಾದಾಮಿ ತಾಲ್ಲೂಕಿನಲ್ಲಿ ಬರಗಾಲ.

1734 ಶ್ರೀ ಎಂ.ಕೆ. ಪಟ್ಟಣ ಶೆಟ್ಟಿ (ಬಾದಾಮಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಸಾರಲಾಗಿದೆಯೆ

ಆ) ಹಾಗಿದ್ದಲ್ಲಿ, ತಾಲ್ಲೂಕಿನಲ್ಲಿ ಯವ ರೀತಿಯ ಬರಗಾಲದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ಕಾಮಗಾರಿಗಳನ್ನು ಕೈಗೊಂಡಿದ್ದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ (ವಿವರಗಳನ್ನು ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ನಾಲ್ಕು ಮಂಡಲಗಳನ್ನು ಅಭಾವ ಪೀಡಿತ ಪ್ರದೇಶಗಳಿಂದು ಗುರ್ತಿಸಲಾಗಿದೆ.

ಆ) ಅಭಾವ ಪೀಡಿತ ಪ್ರದೇಶದಲ್ಲಿ ಉದ್ಯೋಗ ಸೃಜನೆ, ಕುಡಿಯುವ ನೀರಿನ ಪೂರೈಕೆ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಸಂಖ್ಯೆ		
1. ರಸ್ತೆರೀಪೇರಿ	:	6
2. ರಸ್ತೆ ಅಭಿವೃದ್ಧಿ	:	3
3. ರಸ್ತೆ ನಿರ್ಮಾಣ	:	4
4. ಹೂಳೆತ್ತುವಿಕೆ	:	3
5. ಬದು ನಿರ್ಮಾಣ	:	3
6. ನಾಲಾ ನಿರ್ಮಾಣ	:	1
	ಒಟ್ಟು	20

ಬೀದರ್ ಜಿಲ್ಲೆಯಲ್ಲಿ ಬಂಡಿ ರಸ್ತೆಯ ಬಗ್ಗೆ

1729 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೀದರ್ ಜಿಲ್ಲೆಯಲ್ಲಿನ ಎತ್ತಿನಗಾಡಿ ರಸ್ತೆಯು ಒಟ್ಟು ಉದ್ದವೆಷ್ಟು?